ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ' ಎಂಬ ಬೋರ್ಡು ಫಳಫಳನೆ ಹೊಳೆಯುತ್ತಿತ್ತು. ಒಳಗೆ ಹೋಗಬೇಕೆಂದರೆ ಬಿಳೀ ಯೂನಿಫಾರಂ, ಪೇಟಾ ಹಾಕಿದ್ದ ದಫೇದಾರ ಬಿಡಲಿಲ್ಲ. ವಿಸಿಟಿಂಗ್ ಕಾರ್ಡ್ ಕೇಳಿದ. ಹಾಗೆಂದರೇನೆಂದು ತಿಳಿಯದೇ ಕೈಯ್ಯಾಡಿಸಿ ಇಲ್ಲವೆಂದರು. ಆತ ಬಿಳಿಹಾಳೆಯಲ್ಲಿ ಕತ್ತರಿಸಿದ್ದ ಚೀಟಿ ಕೊಟ್ಟು ಹೆಸರು ಬರೆಸಿಕೊಂಡು ಒಳಗೆ ಇಟ್ಟ. ಮೀಟಿಂಗ್ ಬಿಜಿಯಲ್ಲಿದ್ದ ಸಾಹೇಬರು, ಆಮೇಲೆ ಕರೆಕಳಿಸಿದರು...

ಅಳುಕಳುಕುತ್ತಲೇ ಒಳಕ್ಕೆ ಒಂದೊಂದೇ ಹೆಜ್ಜೆ ಇಡುತ್ತಿದ್ದಂತೆಯೇ, ತಾವು ಹೀಗ್ಹೀಗೆ, ಇಂಥ ಊರಿನವರು ಎನ್ನುತ್ತಿದ್ದಂತೆಯೇ, ಕೂತುಕೊಳ್ಳಲು ಹೇಳಿ, ಬೆಲ್ಲು ಬಾರಿಸಿ ಟೀ ತರಲು ಹೇಳಿದರು. ಅಷ್ಟರಲ್ಲಿ ಯಾವುದೋ ಕೆಲಸದ ಮೇಲೆ ಒಳಗೆ ಬಂದ ಹಾಲೇಶಪ್ಪನನ್ನು ಕಂಡು, ತಮ್ಮನ್ನು ನೋಡಿಯೇ ಇಲ್ಲಿಗೆ ಬಂದಿರಬೇಕೆಂದು ಇವರಿಬ್ಬರ ಎದೆಯೂ ನಗಾರಿ ಬಾರಿಸಲಾರಂಭಿಸಿತು. ಎದ್ದು ನಿಲ್ಲಲು ಹೋದವರನ್ನು, 'ಕೂತ್ಕೊಳ್ಳಿ, ಕೂತ್ಕೊಳ್ಳಿ...' ಎಂದರು ಸಾಹೇಬರು. ಶಾಸಕರು ಇವರನ್ನು ಗುರುತಿಸದೆ ನಿಂತುಕೊಂಡೇ, 'ಇದು ಟ್ರಾನ್ಸ್‌ಫರ್‌ರ್ದ್ದು', 'ಇದು ಎಲ್.ಓ.ಸಿ.ದು' ಎನ್ನುತ್ತ ಎರಡು ಮೂರು ಪೇಪರುಗಳಿಗೆ ಅತಿ ವಿನಯದಿಂದ ಸೈನು ಮಾಡಿಸಿಕೊಂಡು ಹೊರಹೋಗುತ್ತಿದ್ದಂತೆಯೇ, 'ಏನು ವಿಷ್ಯ?...' ಎಂದರು. ಮುಂದೆ ಬಿದ್ದಿದ್ದ ರಾಶಿ ರಾಶಿ ಕಡತಗಳನ್ನೆಲ್ಲ ಕಿರುಗಣ್ಣಲ್ಲೇ ಗಮನಿಸುತ್ತಲೇ ಸೈನು ಹಾಕಿ ಹಾಕಿ ಪಕ್ಕಕ್ಕಿಡುತ್ತಲೇ ಮಾತಾಡುತ್ತಿದ್ದರು. ಇವರು ಅಳುಕುತ್ತಳುಕುತ್ತಲೇ ಹೀಗ್ಹೀಗೆ ಸೇತುವೆ ಉದ್ಘಾಟನೆಯಾಯಿತೆಂದು ಹೇಳಿದರು...



'ವಿಷಯ ಗೊತ್ತಾಯ್ತು... ಅನುಕೂಲ ಆಯ್ತಲ್ಲ ಬಿಡಿ...' ಎಂದರು.

'ಹಾಗಲ್ಲ ಸರ್, ತಾವೊಂದು ಸಲ ನಮ್ಮೂರಿಗೆ ಬರ್ಬೇಕಿತ್ತು ಸರ್...'

'ರ್ರೀ... ನನಗೆ ನೂರೆಂಟು ಕೆಲ್ಸಗಳಿರುತ್ತೆ... ಹಿಂಗೆ ಕರೆದ ಕಡೆಗೆಲ್ಲ ಓಡಾಡ್ತ ಹೋದರೆ ಇಲ್ಲಿ ಕೆಲ್ಸ ಯಾರ್ರೀ ಮಾಡೋದು?'

'ಬ್ರಿಡ್ಜ್ ಮೇಲೆ ಓಡಾಡೋಕ್ಕೆ ಭಯ ಆಗಿ ನಮ್ಮೂರಿನ ಯಾರೂ ಓಡಾಡ್ತನೇ ಇಲ್ಲ ಸರ್...' ಎಂದ ರತ್ನಾಕರ ಅಂಜುತ್ತಲೇ.

'ಭಯಾನ, ಯಾಕೆ?' ಎಂದು ಒಂದು ಕ್ಷಣ ಬರೆಯುವುದನ್ನು ನಿಲ್ಲಿಸಿ, ತಲೆ ಎತ್ತಿ ನೋಡಿ, ಕೂಡಲೇ ಇಂಟರ್‌ಕಾಮ್‌ನಲ್ಲಿ, 'ಶಂಕರಪ್ಪಂಗೆ ಫೋನ್ ತಗಳ್ರೀ' ಅಂದರು.

ಅಯ್ಯೋ ಏನು ಕಾದಿದೆಯೋ ಎಂದು ಇಬ್ಬರೂ ತಳಮಳಿಸಿದರು. 'ಯಾಕೋ ಹಂಗೇಳಿದೆ' ಎಂದು ವೆಂಕಟೇಶ ಮೆಲ್ಲಗೆ ತಿವಿದು ತರಾಟೆಗೆ ತೆಗೆದುಕೊಂಡವನು, 'ಹಾಗಲ್ಲ ಸರ್...' ಎಂದು ಸಮಜಾಯಿಷಿ ನೀಡಲು ಮುಂದಾದನು. ಅಷ್ಟರಲ್ಲಿ, ಫೋನ್ ಬಜರ್ಗುಟ್ಟಿತು...